# ನಮ್ಮದು, ಈ ನೆಲ ನಮ್ಮದೇ..



ಉತ್ಪ್ರೇಕ್ಷ ಅಲಂಕಾರ ಚಕ್ರವರ್ತಿಗಳೇ
ಓ ಉಪಮಾ ಲೋಲರೇ,

ಗೊತ್ತಿಲ್ಲವೇ ನಿಮಗೆ
ನಾವು ಪಾತಾಳ ಲೋಕದಿಂದ
ಬಂದವರು

ಈ ಭೂಮಿ
ನಮಗಾಗೇ ಗರ್ಭ ಸಡಿಲಿಸಿ
ದಾರಿ ಮಾಡಿಕೊಟ್ಟಿತು
ನಮ್ಮನು
ಹೆತ್ತು ಹೊತ್ತು ಸಾಕಿ ಸಲುಹಿತು

ನಮ್ಮ ಹೆಸರಿನಿಂದಲೇ
ಈ ಮಣ್ಣು
ಈ ಕಲ್ಲು
ನಮ್ಮ ರಕ್ತದಿಂದಲೇ
ಈ ಸಮುದ್ರ
ಈ ಚಂದಿರ
ಈ ದಾಳಿಂಬೆ ತೋಟ

ಇದು ಕೇವಲ ನಮಗಾಗಿ
ನಮಗಾಗಿಯೇ ಸೃಷ್ಟಿ ಮಾಡಲಾದ ಸ್ವರ್ಗ
ಇದರ ಅಣುಕ್ಷಣದ ಉಸಿರಾಟವೂ
ನಮಗಾಗಿ



ಏನು ಮಾಡಬಲ್ಲಿರಿ?
ನೀವೇನು ಮಾಡಬಲ್ಲಿರಿ?
ನಿಮ್ಮದಲ್ಲದ ಮನೆಯಲ್ಲಿ
ಆಗಂತುಕರು ನೀವು
ಏನು ತಾನೆ ಮಾಡಬಲ್ಲಿರಿ?

ಬಿಟ್ಟು ಬಿಡಿ
ದಯವಿಟ್ಟು ದೂರ ಹೋಗಿ
ನಾವು ಆಣೆ ಮಾಡಿ ಹೇಳುತ್ತೇವೆ
ನೆತ್ತರಲೇ ಅಂತಿಮ ಸ್ನಾನ
ಮಾಡಿ ಮುಗಿಸುವ
ನಮ್ಮ ಹಾಲುಗಲ್ಲದ ಮಕ್ಕಳ ಶಾಪ
ತಟ್ಟಲಿದೆ ನಿಮಗೆ
ಖಂಡಿತವಾಗಿಯೂ ತಟ್ಟಲಿದೆ
ಒಂದು ದಿನ!